"ಕಸ್ತೂರ್... ನೀನು ಒಳ್ಳೆಯ ರಸಿಕಳು."

"ಹಾ, ನಾನು ಏನು ಆಲೋಚಿಸುತ್ತಿದ್ದೇನೆ ಎಂದು ನಿಮ್ಮಿಂದ ಹೇಳಲು ಸಾಧ್ಯವೇ? ಆಶ್ಚರ್ಯವಾಗುತ್ತಿದೆಯೆ?"

"ಹದಿಮೂರನೇಯ ವಯಸ್ಸಿನಿಂದ ನಿನ್ನ ಜೊತೆ ಬದುಕಿರುವ ನನಗೆ ನೀನು ಏನು ಆಲೋಚಿಸುತ್ತೀಯೆ ಎಂಬುದು ತಿಳಿಯದೆ ಹೋಗುತ್ತದೆಯೇನು?"

ಗಹಗಹಿಸಿ ನಗಬೇಕೆಂದುಕೊಂಡ ಕಸ್ತೂರ್, ಸಾಧ್ಯವಾದಷ್ಟೂ ಶಬ್ದವಿಲ್ಲದೆ ನಕ್ಕಳು.

"ಯಾಕೆ ನಗುತ್ತೀಯ, ಕಸ್ತೂರ್. ನಿನ್ನ ತಂದೆ ಮಕಂಜಿಕಾಪಾಡಿಯಾನ ಹಾಗೆ ಶ್ರೀಮಂತನೋ, ಇಪ್ಪತ್ತು ಕೋಣೆಗಳೂ ಎರಡು ಅಂಗಳಗಳೂ ಇರುವ ಮನೆಯೋ ನನ್ನ ಬಳಿ ಇಲ್ಲ ಎಂದು ನಗುತ್ತಿದ್ದೀಯಾ? ನೀನು ಕೇಳಿದರೂ ಹಾಗೊಂದನ್ನು ಕೊಡುವ ಉದ್ದೇಶ ನನಗಿಲ್ಲ."

"ಯಾಕೆ, ಡರ್ಬನ್‌ನಲ್ಲಿ ಮೊದಮೊದಲು ನಾವು ಸಂಸಾರ ಹೂಡಿದ ಮನೆಯಲ್ಲಿ ಎರಡು ಅಂಗಳ ಇತ್ತಲ್ಲವೇ?" ಮತ್ತೆ ಕಸ್ತೂರ್ ನಕ್ಕಳು. "ನನ್ನ ಮರಣದ ಬಳಿಕ ನನ್ನ ಮೇಲೆ ಹೊದಿಸಲು ನೀವು ನೂಲಿನಿಂದ ನೇಯ್ದ ಸೀರೆಯನ್ನು ಜೋಪಾನವಾಗಿ ಎಲ್ಲಿಡುವುದು ಎಂದು ತಿಳಿಯದೆ ನಾನು ಪಟ್ಟ ಪಾಡಿದೆಯಲ್ಲಾ..."

"ಯಾಕೆ ಮತ್ತೆ ನಗುತ್ತಿದ್ದೀಯಾ?" ಸಿಡುಕಿನಿಂದ ಧ್ವನಿಸಿತು ಮೋಹನನ ದನಿ.

"ಆಘಾಖಾನ್ ಸೆರೆಯಲ್ಲಿರುವಾಗ ಮಕರ ಸಂಕ್ರಾಂತಿಗೆ ಎಳ್ಳುಂಡೆ ಮಾಡಲು ಎಳ್ಳು ತರಿಸಿಕೊಡಿ ಎಂದು ಕೇಳಿದಾಗ ನೀವು ಏನು ಹೇಳಿದಿರಿ, ನೆನಪಿದೆಯೇ?"

"ಹ... ನಾವು ಈಗ ಜೈಲಿನಲ್ಲಿದ್ದೇವೆ ಎಂಬುದನ್ನು ಮರೆಯಬೇಡ. ಮನೆಯಲ್ಲಿ ಮಾಡುವುದನ್ನೆಲ್ಲ ಇಲ್ಲಿ ಮಾಡಬೇಕೆಂದುಕೊಳ್ಳಬೇಡ ಎಂದು ಹೇಳಿದೆ, ಅದಕ್ಕೆ ನೀನು..."

"ತಾಳಿ, ತಾಳಿ... ಮೋಹನ್ ನಮಗೆ ಮನೆ ಎಂದು ಒಂದಿತ್ತೇ? ಅಯ್ಯೋ ಮೋಹನ್ ಏನಾಯ್ತು... ಯಾಕೆ ನಿಮ್ಮ ಮುಖ ಹೀಗೆ ಬಿಳುಚಿಕೊಂಡಿದೆ? ತುಂಬ ನೋವಾಗುತ್ತಿದೆಯೇ? ಇನ್ನು ನಿಮ್ಮಿಂದ ಏಳಲು ಸಾಧ್ಯವಿಲ್ಲ ಅಂತ ಕಾಣುತ್ತೆ?"

"ಹೌದು, ಗುಂಡು ದೇಹದೊಳಗೆ ಕೊರೆಯುತ್ತಿದೆ ಅಂತ ಅನಿಸುತ್ತದೆ."

"ಹಾ... ಮೋಹನ್ ಅದು ನಿಮ್ಮ ಅನುಭವಕ್ಕೆ ಬರುತ್ತಿದೆಯೇ?"

"ಹೌದು..." ಮುಂದೆ ಮಾತನಾಡಲಾಗದೆ ಭಾವನೆಗಳು ಒಂದಾದವು. ನಾನು ಅವನ ಕಣ್ಣನ್ನು ನೋಡಿದೆ. ಅವು ಚಂಚಲತೆ ಇಲ್ಲದ ಕಣ್ಣುಗಳು. ಅವನು ಮನುವನ್ನು ನೂಕುತ್ತಾನೆ. ಅವಳಿಗೂ ಸಹ ಏನೋ ನಡೆಯುತ್ತಿದೆ ಎಂದು ಗೊತ್ತಿರಬಹುದು. ನಾನು ನಿರೀಕ್ಷಿಸಿದ್ದ ಆ ಅಂತ್ಯ ಬಂತೆ? ಹಾಗೆಯೇ ಕಾಣುತ್ತದೆ. ಆ ಯುವಕನ ಬಲಗೈಯಲ್ಲಿ ಪಿಸ್ತೂಲ್ ಇದೆ. ಇಗೋ... ಇನ್ನೇನು ಅವನು ಗುಂಡು ಹಾರಿಸುತ್ತಾನೆ.

"ಮೋಹನ್...ಮೋಹನ್..." ಕಸ್ತೂರ್ ದನಿಯಲ್ಲಿ ಆತಂಕವಿತ್ತು. "ಸ್ವಲ್ಪ ಸಹಿಸಿಕೊಳ್ಳಿ... ನೋವು ತುಂಬಿರುವುದೇ ಮರಣ. ನಾನು ನನ್ನ ಕೊನೆಯ ದಿನಗಳಲ್ಲಿ ಬಹಳ ಕಷ್ಟಪಟ್ಟಿದ್ದೇನೆ. ಮಲಗಲೂ ಆಗದೆ, ಕೂರಲೂ ಆಗದೆ. ಹರಳೆಣ್ಣೆ ಕುಡಿದರೆ ಎಲ್ಲ ಸರಿಹೋಗಬಹುದು ಎಂಬ ಒಂದು ಅನಿಸಿಕೆ. ನಮ್ಮ ಮಕ್ಕಳನ್ನು ನೋಡಬೇಕೆಂಬ ಆಸೆ. ನಿಮ್ಮ ಜತೆಯಲ್ಲಿಯೇ ನನ್ನ ಎಲ್ಲ ಸಮಯವನ್ನೂ ಕಳೆಯಬೇಕೆಂಬ ಒಂದು ಆವೇಶ."

"ಒಂದು ನಿಮಿಷ, ಕಸ್ತೂರ್... ನಿನ್ನ ಮರಣದ ಸಮಯದಲ್ಲಿ ಪೆನ್ಸಿಲಿನ್ ಚುಚ್ಚುಮದ್ದು ಹಾಕಿಸಲಿಲ್ಲವೆಂದು ನಿನಗೆ ಬೇಸರವೇ?"

"ಖಂಡಿತವಾಗಿಯೂ ಇಲ್ಲ. ಅದೆಲ್ಲಾ ಮುಗಿದುಹೋದ ಕತೆ. ನನ್ನ ಮರಣದ ತರಹ